

ಇರುವುದರಲ್ಲೇ ಸ್ವಲ್ಪ ಡೀಸೆಂಟು. ಗುಮಾಸ್ತರೋ ಅಥವಾ ಇತರೆ ಸರ್ಕಾರಿ ನೌಕರರ ಮಕ್ಕಳಿರುತ್ತಿದ್ದರು. ನಾವು ಬಿಡುಬೀಸಾದ ಹುಡುಗರಲ್ಲ ಅಂತ ತಾವೇ ಗೆರೆ ಹಾಕಿಕೊಳ್ಳುತ್ತಿದ್ದರು. ನಮ್ಮನ್ನು ತೋರಿಸಿ ಅವ್ರೆಲ್ಲಾ ಪೋಲೀ ಹುಡುಗ್ರು ಸಾರ್... ನಾವು ಹಂಗಲ್ಲ, ಅಂತ ನಮ್ಮಿಂದ ಡಿಸ್ಟೆನ್ಸು ಮೆಂಟೇನು ಮಾಡುತ್ತಿದ್ದರು. ಹೊಟ್ಟೆಯೊಳಗಿನ ಗ್ಯಾಸಿಗೆ ಯಾವ ಭೇದ? ಇವರಿಗೆ ಬರುವುದೇ ಅವರಿಗೂ ಬರುತ್ತಿತ್ತು. ಆದರೂ ಅವರು ಬಿಟ್ಟರೆಲ್ಲಿ ಮಾನ ಹರಾಜಾಗುತ್ತೋ ಅಂತ ಬಿಡದೆ ಹೊಟ್ಟೆಯಲ್ಲೇ ಇಟ್ಟುಕೊಂಡು ಹೆಣಗುತ್ತಿದ್ದರು.

ನಮ್ಮ ಗುಣ ಹೆಸರಿಗೆ ತಕ್ಕಂತೆ ಗುಣವಂತನೇ. ಕ್ಲಾಸು ರೂಮಿನಲ್ಲೂ ಒಳ್ಳೆಯ ಇಮೇಜು ಮೆಂಟೇನು ಮಾಡಿದ್ದ. ಆದರೆ, ಈ ಹಾಳು ಗ್ಯಾಸು ಬಿಡಬೇಕಲ್ಲ? ಟಿಫನೆಂದು ಮನೆಯಲ್ಲಿ ರಾತ್ರಿ ಉಳಿದಿದ್ದನ್ನೇ